**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ**

**ಸಿ.ಸಿ.ನಂ.632/2024**

**ಸಿ.ಡಬ್ಲ್ಯು** 01

**ಪಿ.ಡಬ್ಲ್ಯು** 01

| | | |
|---|---|---|
| ಸಾಕ್ಷಿದಾರರ ಹೆಸರು | – | **ವಸಂತ ಆಚಾರಿ** |
| ತಂದೆಯ ಹೆಸರು | – | ರಾಮಾ ಆಚಾರಿ |
| ವಯಸ್ಸು | – | 59 ವರ್ಷ |
| ಉದ್ಯೋಗ | – | **ಪೊಲೀಸ್ ನಿರೀಕ್ಷಕರು, ಕರಾವಳಿ ಕಾವಲು ಪೊಲೀಸ ಠಾಣೆ, ಗಂಗೊಳ್ಳಿ** |
| ವಾಸ್ತವ್ಯ | – | ಗಂಗೊಳ್ಳಿ |

(ಇಂದು ದಿನಾಂಕ **27-06-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ –ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನಾನು ದಿನಾಂಕಃ **18-10-2021** ರಿಂದ 08**-02-2024** ರವರೆಗೆ ಗೋಕರ್ಣ ಪೊಲೀಸ್ ಠಾಣೆಯಲ್ಲಿ ಪೊಲೀಸ್ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 25-11-2023 ರಂದು 12-45 ಗಂಟೆ ಸಮಯಕ್ಕೆ ಠಾಣಾ ಪ್ರಭಾರದಲ್ಲಿರುವಾಗ ಗೋಕರ್ಣದ ಐ ಬಿ ರಸ್ತೆಯಲ್ಲಿಯ ಕಾಮತ ಫಾರ್ಮ ಹೌಸನಲ್ಲಿರುವ ಕಾಟೇಜನಲ್ಲಿ ವೇಶ್ಯಾವಾಟಿಕ ನಡೆಸುತ್ತಿದ್ದಾರೆ ಎನ್ನುವ ಖಚಿತ ಬಾತ್ಮಿಯ ಮೇರೆಗೆ ಈ ವಿಷಯವನ್ನು ಡಿವಾಯ್‌ಎಸ್ ಪಿ, ಭಟ್ಕಳ ರವರಿಂದ ಮಾಹಿತಿಯನ್ನು ತಿಳಿಸಿ ಅನುಮತಿಯನ್ನು ಪಡೆದುಕೊಂಡಿರುತ್ತೇನೆ ಹಾಗೂ ಆರೋಪಿಗಳು ತಪ್ಪಿಸುವ ಸಂದರ್ಭ ಇರುವುದರಿಂದ ಶೋಧನಾ

ವಾರಂಟ ಪಡೆದುಕೊಂಡಿರುವುದಿಲ್ಲ. ಈ ವಿಷಯವನ್ನು ಚಾಸಾ 24, 9 ರಿಂದ 15 ಹಾಗೂ 17, 18 ರವರಿಗೆ ದಾಳಿಯ ವಿಷಯವನ್ನು ತಿಳಿಸಿರುತ್ತೇನೆ. ಚಾ

ಚಾಸಾ 11 ರವರ ಮುಖಾಂತರ ಚಾ 2 ಹಾಗೂ 3 ರವರನ್ನು ಪಂಚರನ್ನು ಬರಮಾಡಿಕೊಂಡು ಅವರಿಗೆ ದಾಳಿಗೆ ಸಹಕರಿಸುವಂತೆ ಕೇಳಿಕೊಂಡಾಗ ಅವರು ಒಪ್ಪಿಕೊಂಡಿರುತ್ತಾರೆ. ನಂತರ ಅವರಿಗೆ ಈ ಕುರಿತಾಗಿ ನೋಟೀಸ ಜಾರಿ ಮಾಡಿರುತ್ತೇನೆ. ನಮ್ಮ ಠಾಣಾ ಜೀಪನಲ್ಲಿ ಚಾಸಾ 24 ಹಾಗೂ ಚಾಸಾ 2 ಹಾಗೂ 3 ಹಾಗೂ 11 ರವರನುನ ನಮ್ಮ ಜೀಪನಲ್ಲಿ ಕರೆದುಕೊಂಡು ಹೋಗಿ ಇತರರನುನ ಅವರವರ ಬೈಕಿನಲ್ಲಿ ಬರುವಂತೆ ಸೂಚಿಸಿರುತ್ತೇನೆ. ನಾವು ಆಗ 01–00 ಗಂಟೆ ಆಗಿರುತ್ತದೆ. ನಾವು ಐ.ಬಿ ರಸ್ತೆಯ ಮೂಲಕ ಪುಣ್ಯಾಶ್ರಮ ಲಾಡ್ಜ ನಿಂದ ಎದುರು ಬಂದು ಹಳೇಯ ಐಬಿ ರಸ್ತೆಯಿಂದ ಹೊರಟು ಇಳಿಜಾರಿನ ಕಚ್ಚಾ ರಸ್ತೆಯಿಂದ ಹೊರಟು ಕಾಮತ್ ಫಾರ್ಮ ಹೌಸಗೆ ಹೋಗುವ ಗೇಟಿನ ಹಿಂಬದಿಯಲ್ಲಿ ಜೀಪನ್ನು ಹಗೂ ಬೈಕನ್ನು ನಿಲ್ಲಿಸಿದಾಗ ಕಾಟೇಜನ ಮುಂಬದಿಯಲ್ಲಿ ಇದ್ದ ಇಬ್ಬರು ಗಂಡಸು ಹಾಗೂ ಒಬ್ಬ ಮಹಿಳೆಯು ನಮ್ಮನ್ನು ನೋಡಿ ಕೂಡಲೇ ಅಲ್ಲಿಂದ ಓಡಿ ಹೋಗಲು ಪ್ರಯತ್ನಿಸಿದ್ದು, ಅವರನ್ನು ಚಾಸಾ 24 ಹಾಗೂ ಚಾಸಾ 11 ಹಾಗೂ 12 ರವರು ಓಡಿ ಹೋದ ವ್ಯಕ್ತಿಗಳನ್ನು ಹಿಡಿದಿರುತ್ತಾರೆ. ಸದ್ರಿ ಜಾಗದಲ್ಲಿ ನನಗೆ ಬಾತ್ಮಿ ಬಂದಂತೆ ವೇಶ್ಯಾವಾಟಿಕೆಯನ್ನು ನಡೆಸುತ್ತಿರುವುದು ಖಾತ್ರಿ ಆಗಿರುತ್ತದೆ.

ಚಾಸಾ 12 ರವರು ಒಬ್ಬ ವ್ಯಕ್ತಿಯನ್ನು ಹಿಡಿದಿದ್ದು, ಆತನ ಹೆಸರನ್ನು ಪಂಚರ ಸಮಕ್ಷಮ ವಿಚಾರಿಸಿದಾಗ ಆತನ ಹೆಸರು ರಫಿಉಲ್ಲಾ ಸಃ ಚಿತ್ರದುರ್ಗಾ ಎಂದು ತಿಳಿಸಿರುತ್ತಾನೆ. ಚಾಸಾ 11 ರವರು ಹಿಡಿದಿರಿರುವ ವ್ಯಯ ಹೆಸರು ಹಾಗೂ ವಿಳಾಸವನ್ನು ವಿಚಾರಿಸಲಾಗಿ ಆತನ ಹೆಸರು ಸಚಿನ ನಾಗಭೂಷಣ ಆಚಾರಿ, ಸಾಃ ಗೋಕರ್ಣ ಎಂದು ತಿಳಿಸಿರುತ್ತಾರೆ. ಚಾಸಾ 24 ರವರು ಹಿಡಿದ ವ್ಯಕ್ತಿಯ ಹೆಸರನ್ನು ವಿಚಾರಿಸಿದಾಗ ಹರ್ಷಿದಾ ಬಾನು, ಸಾಃ ಚಿತ್ರದುರ್ಗಾ ಎಂದು ತಿಳಿಸಿರುತ್ತಾರೆ.

ಈ ಬಗ್ಗೆ ಪ್ರಶ್ನಿಸಿದಾಗ ಯಾವುದೇ ಉತ್ತರನ್ನು ನೀಡಲಿಲ್ಲ. ನಾವು ಅವರನ್ನು ವಿಚಾರಿಸಿದಾಗ ವೇಶ್ಯಾವಾಟಿಕೆ ನಡೆಸುತ್ತಿರುವುದಾಗಿ ಒಪ್ಪಿಕೊಂಡಿರುತ್ತಾರೆ.

ನಾವು ಕೂಡಲೇ ಪಂಚರ ಸಮಕ್ಷಮ ಕಾಮತ ಫಾರ್ಮ ಹೌಸನ ಕಾಟೇಜಗಳನ್ನು ಪರಿಶೀಲಿಸಲಾಗಿ ಪೂರ್ವ ಬದಿಯ ಕಾಟೇಜನಲ್ಲಿ ಪರಿಶೀಲಿಸಿದಾಗ ಇಬ್ಬರು ಗಂಡಸು ಹಾಗೂ ಒಂದು ಹೆಂಗಸು ಇದ್ದು, ಅವರ ಹೆಸರನ್ನು ವಿಚಾರಿಸಲಾಗಿ ತುಕಾರಾಮ ಓಮು ಕುಡ್ತಳಕರ, ಸಾಃ ಅಂಕೋಲಾ ಎಂದು ತಿಳಿಸಿರುತ್ತಾರೆ. ಆತನ ಜೊತೆಗೆ ಇದ್ದ ಸಂತ್ರಸ್ತ ಮಹಿಳೆಯ ಹೆಸರನ್ನು ವಿಚಾರಿಸಲಾಗಿ ಸಯರಾ ಖಾತೂನ ತಂದೆ ಜಾನ್ ಮಹಮ್ಮದ ಸಾಬ ಎಂದು ತಿಳಿಸಿರುತ್ತಾರೆ. ಅವರನ್ನು ಬಂದ ಕಾರಣದ ಕುರಿತಾಗಿ ವಿಚಾರಿಸಿದಾಗ ಚಾಸಾ 4 ರವರು ತಮಗೆ ಹಣದ ತೊಂದರೆ ಇರುವುದರಿಂದ 1 ಹಾಗೂ 2ನೇ ಆರೋಪಿತರು ನನ್ನನ್ನು ಕಾಟೇಜಗೆ ಕರೆದುಕೊಂಡು ಬಂದಿದುದ ಇಲ್ಲಿ ನನಗೆ 3ನೇ ಆರೋಪಿತನನ್ನು ಪರಿಚಯಿಸಿ ವೇಶ್ಯಾವಾಟಿಕೆಯಲ್ಲಿ ಸಹಕರಿಸಿದರೆ ಹಣವನುನ ನೀಡುವುದಾಗಿ ತಿಳಿಸಿರುತ್ತಾರೆ. ಚಾಸಾ 4 ರವರನ್ನು ವಿಚಾರಿಸಿದಾಗ ಅವಳು 01-00 ಗಂಟೆಗೆ ಬಂದಿವುರುದಾಗಿ ತಿಳಿಸಿರುತ್ತಾಳೆ. ಆ ವ್ಯಕ್ತಿಯ ಬಗ್ಗೆ ವಿಚಾರಿಸಿದಾಗ ಆತನು 2ನೇ ಗಿರಾಕಿಯಾಗಿದ್ದು, ಆತನು ನೀಡಿದ ಹಣವನ್ನು 2ನೇ ಆರೋಪಿತಳಿಗೆ ನೀಡಿರುವುದಾಗಿ ತಿಳಿಸಿರುತ್ತಾಳೆ. ಕಾಟೇಜನ್ನು ಪರಿಶೀಲಿಸಲಾಗಿ ಅಲ್ಲಿ ಒಂದು ಕಾಂಡಮ ಸಿಕ್ಕಿರುತ್ತದೆ.

ನಂತರ ಕಾಟೇಟನ ಇನ್ನೋಂದು ರೂಮನ್ನು ಪರಿಶೀಲಿಸಿದಾಗ ಒಂದು ಗಂಡಸು ಹಾಗೂ ಒಂದು ಹೆಂಗಸು ಅವರ ಹೆಸರನ್ನು ವಿಚಾರಿಸಲಾಗಿ ಚಂದ್ರಕಾಂತ ತಿಮ್ಮಪ್ಪ ತಾಂಡೇಲ, ಸಾಃ ಅಂಕೋಲಾ ಎಂದು ತಿಳಿಸಿರುತ್ತಾರೆ. ಆತನ ಜೊತೆಗೆ ಇದ್ದ ಸಂತ್ರಸ್ತ ಮಹಿಳೆಯ ಹೆಸರನ್ನು ವಿಚಾರಿಸಲಾಗಿ ಅಶ್ವಿನಿ ಎಚ್ ವಿ, ಗಂಡ ಸ್ವಾಮಿ ಸಾಃ ಮೈಸೂರು ಎಂದು ತಿಳಿಸಿರುತ್ತಾರೆ. ಅವರನ್ನು ಬಂದ ಕಾರಣದ ಕುರಿತಾಗಿ ವಿಚಾರಿಸಿದಾಗ ಚಾಸಾ 5 ರವರು ತಮಗೆ ಹಣದ ತೊಂದರೆ

ಇರುವುದರಿಂದ 1 ಹಾಗೂ 2ನೇ ಆರೋಪಿತರು ನನ್ನನ್ನು ಕಾಟೇಜಗೆ ಕರೆದುಕೊಂಡು ಬಂದಿದುದ ಇಲ್ಲಿ ನನಗೆ 3ನೇ ಆರೋಪಿತನನ್ನು ಪರಿಚಯಿಸಿ ವೇಶ್ಯಾವಾಟಿಕೆಯಲ್ಲಿ ಸಹಕರಿಸಿದರೆ ಹಣವನ್ನು ನೀಡುವುದಾಗಿ ತಿಳಿಸಿರುತ್ತಾರೆ. ಆ ವ್ಯಕ್ತಿಯ ಬಗ್ಗೆ ವಿಚಾರಿಸಿದಾಗ ಆತನು 2ನೇ ಗಿರಾಕಿಯಾಗಿದ್ದು, ಆತನು ತನಗೆ ರೂ.2500-00 ನೀಡಿದ್ದು, ಸದ್ರಿ ಹಣವನ್ನು 2ನೇ ಆರೋಪಿತಳಿಗೆ ನೀಡಿರುವುದಾಗಿ ತಿಳಿಸಿರುತ್ತಾಳೆ. ಕಾಟೇಜನ್ನು ಪರಿಶೀಲಿಸಲಾಗಿ ಅಲ್ಲಿ ಎರಡು ಕಾಂಡಮ ಸಿಕ್ಕಿರುತ್ತದೆ. ಒಂದು ಕಾಂಡಮನ್ನು ಸಿಂಕನಲ್ಲಿ ಹಾಕಿರುವುದಾಗಿ ತಿಳಿಸಿರುತ್ತಾರೆ.

ನಂತರ ಕಾಟೇಟನ ಇನ್ನೋಂದು ರೂಮನ್ನು ಪರಿಶೀಲಿಸಿದಾಗ ಅಲ್ಲಿ ಒಂದು ಹೆಂಗಸು ಇದ್ದು ಆಕೆಯ ಹೆಸರನ್ನು ವಿಚಾರಿಸಲಾಗಿ ಮಂಜುಳಾ ಕೋಂ ದೇವೆಂದ್ರ ಸಾಃ ಚಿತ್ರದುರ್ಗಾ ಎಂದು ತಿಳಿಸಿರುತ್ತಾರೆ. ಅವರನ್ನು ಬಂದ ಕಾರಣದ ಕುರಿತಾಗಿ ವಿಚಾರಿಸಿದಾಗ ಚಾಸಾ 6 ರವರು ತಮಗೆ ಹಣದ ತೊಂದರೆ ಇರುವುದರಿಂದ 1 ಹಾಗೂ 2ನೇ ಆರೋಪಿತರು ನನ್ನನ್ನು ಕಾಟೇಜಗೆ ಕರೆದುಕೊಂಡು ಬಂದಿದುದ ಇಲ್ಲಿ ನನಗೆ 3ನೇ ಆರೋಪಿತನನ್ನು ಪರಿಚಯಿಸಿ ವೇಶ್ಯಾವಾಟಿಕೆಯಲ್ಲಿ ಸಹಕರಿಸಿದರೆ ಹಣವನ್ನು ನೀಡುವುದಾಗಿ ತಿಳಿಸಿರುತ್ತಾರೆ. ಗಿರಾಕಿಗಳು ಬರುವವರೆಗೆ ರೂಮನಲ್ಲಿ ಇರು ಎಂದು ಕಾಯಲು ತಿಳಿಸಿರುತ್ತಾರೆ ಎಂದು ತಿಳಿಸಿರುತ್ತಾರೆ. ನೋಂದ ಮಹಿಳೆಯರನ್ನು ಆರೋಪಿತರು ವೇಶ್ಯಾವಾಟಿಕೆಗೆ ಬಳಸುವ ಉದ್ದೇಶವನ್ನು ಹೊಂದಿರುವುದು ಕಂಡು ಬಂದಿರುತ್ತದೆ.

ಚಾಸಾ 1 ಹಾಗೂ 2 ರವರ ಸಮಕ್ಷಮ 2ನೇ ಆರೋಪಿತಳ ಬಳಿ ರೂ.6500/- ರೂಪಾಯಿಗಳು ಹಾಗೂ 3 ಕಾಂಡಮಗಳು ಹಾಗೂ ಮೊಬೈಲನ್ನು ವಶಪಡಿಸಿಕೊಂಡಿರುತ್ತೇವೆ. 1ನೇ ಆರೋಪಿತನ ಬಳಿ ಮಹಿಳೆಯನ್ನು ಹೇಗೆ ಕರೆದುಕೊಂಡು ಬಂದಿರುವಿರಿ ಎಂದು ಕೇಳಿದಾಗ ಆತನು ಅಲ್ಲೇ ಹತ್ತಿರದಲ್ಲಿ ಇದ್ದ ಇನೋವಾ ಕಾರ ನಂಬರ KA 28 P 1285 ಆಗಿದ್ದು ಅದನ್ನು ಮುಂದಿನ ಕ್ರಮಕ್ಕಾಗಿ ವಶಪಡಿಸಿಕೊಂಡಿರುತ್ತೇವೆ. ಸದ್ರಿ ವಸ್ತುಗಳನ್ನು ಚಾಸಾ 2 ಹಾಗೂ 3 ರವರ

ಸಮಕ್ಷಮ ಪಂಚನಾಮೆಯನ್ನು ಮಧ್ಯಾಹ್ನ 01–15 ಗಂಟೆಯಿಂದ 03–15 ರವರೆಗೆ ಜರುಗಿಸಿ ವಶಕ್ಕೆ ಪಡೆದುಕೊಂಡಿರುತ್ತೇನೆ. ಸದ್ರಿ ಸಮಯದಲ್ಲಿ ಕಚ್ಚಾ ನಕಾಶೆ ಹಾಗೂ ಫೋಟೋವನ್ನು ತೆಗೆದಿರುತ್ತೇನೆ.

ಸಾಕ್ಷಿಗೆ ಎರಡು ದಾಖಲಾತಿಗಳನ್ನು ತೋರಿಸಲಾಗಿ, ಸಾಕ್ಷಿಯು ಸದ್ರಿ ದಾಖಲಾತಿಗಳು ನೋಡಿ ಗುರುತಿಸಿದ್ದು, ಸದ್ರಿ ದಾಖಲಾತಿಗಳು ಕ್ರಮವಾಗಿ ಕಚ್ಚಾ ನಕಾಶೆ ಹಾಗೂ ಪಂಚನಾಮೆಯಾಗಿದ್ದು, ಅವುಗಳನ್ನು **ಕ್ರಮವಾಗಿ ನಿ.ಪಿ.1 ಹಾಗೂ ನಿ.ಪಿ.2 ಎಂದು**, ಸಾಕ್ಷಿಯ ಸಹಿಯನ್ನು **ನಿ.ಪಿ.1ಎ ಹಾಗೂ ನಿ.ಪಿ.2ಎ** ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು **ಫೋಟೋವನ್ನು** ತೋರಿಸಲಾಗಿ, ಸಾಕ್ಷಿಯು ಅದರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.3 ಎಂದು** ಗುರುತಿಸಲಾಯಿತು.

ಈ ಎಲ್ಲಾ ಆರೋಪಿತರು ತಮ್ಮ ಲಾಭಗೋಸ್ಕರ ಸಂತ್ರಸ್ತ ಮಹಿಳೆಯರ ಪರಿಸ್ಥಿತಿಯನ್ನು ದುರುಪಯೋಗಿಪಡಿಸಿಕೊಂಡು ಕಾಮತ ಫಾರ್ಮ ಹೌಸನ ಕಾಲೇಜನಲ್ಲಿ ಇರಿಸಿ, ವೇಶ್ಯಾವಾಟಿಕೆಯನ್ನು ಗಿರಾಕಿಗಳಿಂದ ಬಂದ ಹಣವನ್ನು ಪಡೆದು ಮಹಿಳೆಯರನ್ನು ಲೈಂಗಿಕ ಶೋಷನೆಗೆ ಒಳಪಡಿಸಿರುತ್ತಾರೆ. ಮೂವರೂ ಆರೋಪಿತರನ್ನು ವಶಕ್ಕೆ ಪಡೆದುಕೊಂಡು, ವಶಪಡಿಸಿಕೊಂಡ ವಸ್ತುಗಳ ಸಮೇತವಾಗಿ ಠಾಣೆಗೆ ಬಂದು ಸರಕಾರದ ಪರಿವಾಗಿ ಫಿರ್ಯಾದನ್ನು ನೀಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಸದ್ರಿ ದಾಖಲಾತಿಯು ದೂರು ಆಗಿದ್ದು, ಅದನ್ನು **ನಿ.ಪಿ.4 ಎಂದು,** ಸಾಕ್ಷಿಯ ಸಹಿಯನ್ನು **ನಿ.ಪಿ.4ಎ ಎಂದು** ಗುರುತಿಸಲಾಯಿತು.

ನ್ಯಾಯಾಲಯದ ಮುಂದೆ ಇರುವ ಸೀಲ್ ಕವರನ್ನು ತೆರೆಯಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು. ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ **ನಗದು ಹಣ ರೂ.6,500/–** ವನ್ನು ತೋರಿಸಲಾಗಿ, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು **ಮು.ಮಾ.1 ಎಂದು,** ಸಾಕ್ಷಿಯ ಸಹಿಯನ್ನು **ಮು.ಮಾ.1ಎ ಎಂದು** ಗುರುತಿಸಲಾಯಿತು.

ಸಾಕ್ಷಿಗೆ ಮೂರು ಕಾಂಡಮಗಳನ್ನು ತೋರಿಸಲಾಗಿ ಅವುಗಳನ್ನು ಒಟ್ಟಾಗಿ **ಮು.ಮಾ.2 ಎಂದು** ಸಾಕ್ಷಿಯ ಸಹಿಯನ್ನು **ಮು.ಮಾ.2ಎ ಎಂದು** ಗುರುತಿಸಲಾಯಿತು.

**AMAQ Company Mobile** ಗಳನ್ನು ನೋಡಿ ಗುರುತಿಸಿದ್ದು, ಆದನ್ನು **ಮು.ಮಾ 3** ಎಂದು ಗುರುತಿಸಲಾಯಿತು.

**OPPO Company** 1 **Mobile** ನ್ನು ನೋಡಿ ಗುರುತಿಸಿದ್ದು, ಆದನ್ನು **ಮು.ಮಾ 4** ಎಂದು ಗುರುತಿಸಲಾಯಿತು.

ಕಡತವನುನ ಮುಂದಿನ ತನಿಖೆಗಾಗಿ ಚಾಸಾ 23 ರವರಿಗೆ ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 3ನೇ ಆರೋಪಿತನನ್ನು ನೋಡಿ ಗುರುತಿಸಿದ್ದು, 1 ಹಾಗೂ 2ನೇ ಆರೋಪಿತರು ಗೈರು ಹಾಜರಿ ಇದ್ದು ವಿನಾಯತಿ ಅರ್ಜಿಯನ್ನು ಸಲ್ಲಿಸಿದ್ದು, ಗುರುತಿಸುವಿಕೆಯಲ್ಲಿ ತಕರಾರು ಇಲ್ಲ ಎಂದು ನುಡಿದಿರುತ್ತಾರೆ.

**ಪಾಟೀ ಸವಾಲು –ಆರೋಪಿ ಪರ ಶ್ರೀ.ಎಸ್.ಜೆ.ಎನ್. ವಕೀಲರಿಂದ**

ನಾನು ಘಟನೆ ನಡೆದಿದೆ ಎನ್ನಲಾದ ದಿನ ಠಾಣೆಯಲ್ಲಿ ಕರ್ತವ್ಯದಲ್ಲಿ ಇದ್ದೇ ಎನ್ನುವ ಕುರಿತಾಗಿ ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನನಗೆ ಯಾವುದೇ ಬಾತ್ಮಿ ಬರಲಿಲ್ಲ ಎಂದರೆ ಸರಿಯಲ್ಲ. ನಾನು ಘಟನೆ ನಡೆದಿದೆ ಎನ್ನಲಾದ ದಿನ

ಕರ್ತವ್ಯದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ಮೇಲಾಧಿಕಾರಿಗಳಿಗೆ ದಾಳಿಯ ವಿಷಯವನ್ನು ತಿಳಿಸಿದ ಕುರಿತು ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಾನು ಮೌಖಿಕ ಅನುಮತಿಯನ್ನು ಪಡೆದುಕೊಂಡಿರುವುದಾಗಿ ತಿಳಿಸಿರುತ್ತಾರೆ. ಈ ಕುರಿತಾಗಿ ನಿಪಿ 4 ರಲ್ಲಿ ನಮೂದಿಸಲು ತೊಂದರೆ ಇರಲಿಲ್ಲ.

ನಮ್ಮ ಠಾಣೆಯಿಂದ ಕಾಮತ್ ಫಾರ್ಮ ಹೌಸ ಎಷ್ಟು ದೂರ ಹಾಗೂ ಯಾವ ದಿಕ್ಕಿನಲ್ಲಿ ಇದೆ ಎಂಬ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ನಮಗೆ ಸಾಕಷ್ಟು ಕಾಲಾವಕಾಶ ಇದ್ದರೂ ಸಹ ಶೋಧನಾ ಸಮುಚ್ಚಿತ ವಾರಂಟನ್ನು ಉದ್ದೇಶಪೂರ್ವಕವಾಗಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದಾಳಿಯಲ್ಲಿ ಸಹಕರಿಸಿದ ಸಿಬ್ಬಂದಿಗಳು ಠಾಣೆಯಲ್ಲಿ ಇದ್ದರು ಎಂಬ ಬಗ್ಗೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಅವರು ಠಾಣೆಯಲ್ಲಿ ಕರ್ತವ್ಯದಲ್ಲಿ ಇದ್ದರು ಎಂದು ನುಡಿಯುತ್ತಾರೆ. ನಾವು ಈ ದಾಳಿಯ ಕುರಿತಾಗಿ ನಮ್ಮ ಠಾಣಾ ದಿನಚರಿಯಲ್ಲಿ ಹಾಗೂ ಚಲನ ವಲನಗಳ ರಜಿಸ್ಟರನಲ್ಲಿ ನಮೂದು ಮಾಡಲಿಲ್ಲ ಎಂದರೆ ಸರಿಯಲ್ಲ. ಸದ್ರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರಲಿಲ್ಲ. ಯಾರು ಯಾರು ಯಾವ ಯಾವ ವಾಹನದಲ್ಲಿ ಬಂದಿದ್ದಾರೆ ಎಂಬ ಬಗ್ಗೆ ನಿಪಿ 1 ರಲ್ಲಿ ನಮೂದಿಸಿರುತ್ತೇನೆ.

ನಿಪಿ 4 ರಲ್ಲಿ ಈ ಕುರಿತಾಗಿ ನಮೂದಿಸಲು ಯಾವುದೇ ತೊಂದರೆ ಇರಲಿಲ್ಲ. ಚಾಸಾ 2 ಹಾಗೂ 3 ರವರ ವಿರುದ್ಧ ಸಾಕಷ್ಟು ಪ್ರರಣಗಳಲ್ಲಿ ಪಂಚರಾಗಿ ಬಂದಿದ್ದಾರೆ ಎಂದರೆ ಸರಿಯಲ್ಲ. ಚಾಸಾ 2 ಹಾಗೂ 3 ರವರು ನಮ್ಮ ಠಾಣೆಯ ಖಾಯಂ ಪಂಚರ ಎಂದರೆ ಸರಿಯಲ್ಲ.

ಗೋಕರ್ಣದ ಬಂಗ್ಲೆಗುಡ್ಡಕ್ಕೆ ಹೋಗಲು 4 ದಾರಿಗಳು ಇವೆ ಎಂದರೆ ಸಾಕ್ಷಿಯು 2 ದಾರಿಗಳು ಇವೆ ಎಂದು ನುಡಿಯುತ್ತಾರೆ. ನಾವು ನಮ್ಮ ವಾಹನವನ್ನು ಗೇಟನ ಎಷ್ಟು ದೂರ

ಹಾಗೂ ಯಾವ ದಿಕ್ಕಿನಲ್ಲಿ ನಿಲ್ಲಿಸಿದ್ದೇವೆ ಎಂಬ ಬಗ್ಗೆ ನಿಪಿ 1 ರಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ನಾವು ಸದ್ರಿ ಗೇಟನ್ನು ತೋರಿಸುವಂತಹ ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸದ್ರಿ ಗೇಟನ ಮುಂದೆ ವಾಚ್‌ಮ್ಯಾನ ಇರಲಿಲ್ಲ. ಸದ್ರಿ ಗೇಟನ ಉದ್ದ, ಅಗಲ ಹಾಗೂ ವಿಸ್ತೀರ್ಣ ನಮೂದಿಸಿಲ್ಲ ಎಂದರೆ ಸರಿ. ಸದ್ರಿ ಗೇಟ ಘಟನಾ ಸ್ಥಳದಿಂದ ಎಷ್ಟು ದೂರದಲ್ಲಿ ಇದೆ ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ.

ಗೋಕರ್ಣ ಒಂದು ಪ್ರವಾಸಿ ತಾಣ ಎಂದರೆ ಸರಿ. ಪ್ರವಾಸಿ ತಾಣವಾಗಿರುವುದರಿಂದ ಸದ್ರಿ ಕಾಟೇಜನಲ್ಲಿ ಜನ ಇರುತ್ತಾರೆ ಎಂದರೆ ಸಾಕ್ಷಿಯು ಸದ್ರಿ ಕಾಟೇಜ ದೂರ ಇರುವುದರಿಂದ ಅಲ್ಲಿ ಜನ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾವು ದಾಳಿಯ ಪೂರ್ವದಲ್ಲಿ ವಾಚ್ ಮಾಡಿರುವುದಿಲ್ಲ. ಮೂರು ಜನ ವ್ಯಕ್ತಿಗಳು ನಮ್ಮನ್ನು ನೋಡಿ ಓಡಿ ಹೋಗಿರುತ್ತಾರೆ. ಅವರು ಓಡಿ ಹೋಗಿರುವ ದಿಕ್ಕನ್ನು ಹಾಗೂ ದೂರವನ್ನು ನಿಪಿ 1 ರಲ್ಲಿ ನಮೂದಿಸಿಲ್ಲ ಎಂದರೆ ಸಾಕ್ಷಿಯು ಅವರು ನಮಗೆ ಸಿಕ್ಕಿರುತ್ತಾರೆ ಎಂದು ನುಡಿಯುತ್ತಾರೆ. ಓಡಿ ಹೋದ ವ್ಯಕ್ತಿಗಳು ಧರಿಸಿದ ಬಟ್ಟೆಯ ಕುರಿತಾಗಿ ನಾನು ನಿಪಿ 1 ಹಾಗೂ 4 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. ಆರೋಪಿತರನ್ನು ಹಿಡಿದ ಸ್ಥಳದಲ್ಲಿ ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರಿದು ನಿಪಿ 1 ಲ್ಲಿ ಈ ಕುರಿತಾಗಿ ನಮೂದು ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ವ್ಯಕ್ತಿಗಳನ್ನು ಹಿಡಿದಂತಹ ಜಾಗದ ಚತುರ್ಗಡಿಯನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರನ್ನು ಹಿಡಿದ ಜಾಗದಲ್ಲಿ ಅಂಗಜಪ್ತಿಯನ್ನು ಮಾಡಿಲ್ಲ ಎಂದರೆ ಸಾಕ್ಷಿಯು ನಾವು ಕಾಟೇಜನ ಪಕ್ಕದಲ್ಲಿ ಹಿಡಿದಿದರುತ್ತೇವೆ ಎಂದು ನುಡಿಯುತ್ತಾರೆ, ಈ ಕುರಿತಾಗಿ ನಾವು ನಿಪಿ 1 ರಲ್ಲಿ ನಮೂದಿಸುತ್ತೇವೆ. ಆರೋಪಿತರೂ ಮೂವರೂ ಸಹ ಬೇರೆ ಬೇರೆ ದಿಕ್ಕಿಗೆ ಓಡಿ ಹೋಗಿದ್ದು ನಮ್ಮ ಸಿಬ್ಬಂದಿಗಳು ಅವರನ್ನು ಹಿಡಿದಿದ್ದು ಅವರಿಗೆ ತುಂಬಾ ದೂರ ಓಡಲು ಅಲ್ಲಿ ಕಂದಕ ಇರುವುದರಿಂದ ಸಾಧ್ಯವಾಗಿರುವುದಿಲ್ಲ. ಸದ್ರಿ

ಕಂದಕವು ಎಷ್ಟು ದೂರ ಇದೆ ಎಂಬ ಬಗ್ಗೆ ನಿಪಿ 1 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. ಆರೋಪಿತರ ಅಂಗಜಪ್ತಿಯನ್ನು ಮಾಡುವ ಪೂರ್ವದಲ್ಲಿ ನಮ್ಮ ಅಂಗ ಜಪ್ತಿಯನ್ನು ಮಾಡಿಕೊಂಡು ಯಾದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿ 1 ರಲ್ಲಿ ಕಾಟೇಜ ಎಷ್ಟು ಉದ್ದ ಹಾಗೂ ಎಷ್ಟು ವಿಸ್ತೀರ್ಣ ಎಂಬ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ. ಕಾಟೇಜನಲ್ಲಿ ಅಡಿಗೆ ಹಾಗೂ ಇತರ ಸಿಬ್ಬಂದಿಗಳು ಇರುತ್ತಾರೆ ಎಂದರೆ ಸಾಕ್ಷಿಯು ಸ್ದ್ರಿ ಕಾಟೇಜನಲ್ಲಿ ಯಾವುದೇ ಅಡಿಗೆ ಸಾಮಾನುಗಳು ಸಿಕ್ಕಿರುವುದಿಲ್ಲ ಎಂದು ನುಡಿಯುತ್ತಾರೆ.

ನಿ.ಪಿ.1 ನ್ನು ಕಾಟೇಜನಲ್ಲಿ ನಿಂತುಕೊಂಡು ಬರೆದಿದ್ದೇವೆ ಎಂದು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ನಾವು ಪ್ರತ್ಯೇಕವಾದ ಕಾಟೇಜನಲ್ಲಿ ಪ್ರತ್ಯೇಕವಾದ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಸ್ದ್ರಿ ಕಾಟೇಜನಲ್ಲಿ ಇದ್ದಂತಹ ಬೇಡ್‌ಗಳನ್ನು ವಶಪಡಿಸಿಕೊಳ್ಳುವ ಅವಶ್ಯಕತೆ ಕಂಡು ಬಂದಿರುವುದಿಲ್ಲ. ನಿಪಿ 2 ರಲ್ಲಿ ದಿಕ್ಕುಗಳನ್ನು ತೋರಿಸಲು ತೊಂದರೆ ಇರಲಿಲ್ಲಾ ಎಂದರೆ ಸರಿಯಲ್ಲ. ನಾವು ನಿಪಿ 2 ರಲ್ಲಿ ಘಟನಾ ಸ್ಥಳದಲ್ಲಿ ಇದ್ದಂತಹ ವಸ್ತು ಸ್ಥಿತಿಯ ಬಗ್ಗೆ ನಮೂದು ಮಾಡಿರುತ್ತೇವೆ. ನಾವು ದಾಳಿಯ ಕಾಲಕ್ಕೆ ಘಟನಾ ಸ್ಥಳಕ್ಕೆ ಹೋಗಿದ್ದರೆ ಈ ಕುರಿತಾಗಿ ಸರಿಯಾದ ಮಾಹಿತಿ ನೀಡುತ್ತಿದ್ದೇವು ಎಂದರೆ ಸಾಕ್ಷಿಯು ನಾನು ದಾಳಿಗೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಚಾಸಾ 4 ರಿಂದ 6 ರವರು ಎಲ್ಲಿಂದ ಬಂದಿದ್ದಾರೆ ಎಂಬ ಬಗ್ಗೆ ಯಾವುದೇ ದಾಖಲಾತಿಯನ್ನು ಕಲೆ ಹಾಕಲಿಲ್ಲ ಎಂದರೆ ಸಾಕ್ಷಿಯು ಅವರು ಮೌಖಿಕವಾಗಿ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ.

ಮು.ಮಾ 1 ಹಾಗೂ 2 ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳದಲ್ಲಿ Records of Reasons ನ್ನು ಬರೆದಿರುವುದಿಲ್ಲ. ನಿಪಿ 1 ನ್ನು ನಮಗೆ ತನಿಖಾ ಕಿಟ್‌ನ ಮುಖಾಂತರ ಮಾಡಬೇಕು ಎಂಬ ನಮ್ಮ ಮೇಲಾಧಿಕಾರಿಗಳ ಆದೇಶ ಇರುವುದರಿಂದ ನಾವು ನಿ.ಪಿ1 ನ್ನು ಗಣಕೀಕೃತಗೊಳಿಸಿರುತ್ತೇವೆ. ನಾವು ಗಣಕೀಕೃತಗೊಳಿಸಿದ ಲ್ಯಾಪಟ್ಯಾಪನಲ್ಲಿ ಹಳೇಯ

ದಾಖಲೆಗಳು ಇರುತ್ತವೆ ಎಂದರೆ ಸರಿ. ನಿಪಿ 1 ರಲ್ಲಿ ಇಪ್ಪಿ ತಿದ್ದುಪಡಿ ಮಾಡಿದ ಬಗ್ಗೆ ಚಿಕ್ಕ ಸಹಿಯನ್ನು ಹಾಕಲಿಲ್ಲ ಎಂದರೆ ಸರಿ ಹಾಗೂ ನಿಪಿ 1 ರ ಕೊನೆಯಲ್ಲಿ ಇಂತಿಷ್ಟು ತಿದ್ದುಪಡಿ ಆಗಿವೆ ಎಂದು ನಮೂದು ಮಾಡಿಲ್ಲ ಎಂದರೆ ಸರಿ. ನಮ್ಮ ತನಿಖಾ ಕಿಟ್ ಹಾಗೂ ಮುದ್ದೇಮಾಲುಗಳು ತೋರಿಸುವ ಹಾಗೆ ಯಾವುದೇ ಭಾವಚಿತ್ರವನ್ನು ತೆಗೆಯಲಿಲ್ಲ ಎಂದರೆ ಸರಿ.

ನಿಪಿ 3 ರಲ್ಲಿ ಸಮಯ ಹಾಗೂ ದಿನಾಂಕ ನಮೂದು ಇಲ್ಲ ಎಂದರೆ ಸರಿ. ನಿಪಿ 3 ನ್ನು ಬೇರೆ ಎಲ್ಲೋ ತೆಗೆದುಕೊಂಡು ಈ ಪ್ರಕರಣಕ್ಕೆ ಅಳವಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಕಾಮತ್ ಫಾರ್ಮ ಹೌಸ ಎಂಬ ಕಾಟೇಜ ಇಲ್ಲ ಎಂದರೆ ಸರಿಯಲ್ಲ. ನಾನು ಕಾಮತ್ ಫಾರ್ಮ ಹೌಸ ಕಾಟೇಜಗೆ ಹೋಗಲಿಲ್ಲ ಎಂದರೆ ಸರಿಯಲ್ಲ. ಗೋಕರ್ಣದ ಪ್ರವಾಸಿಗರನ್ನು ಉಪಯೋಗಿಸಿಕೊಂಡು ಈ ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ಈ ಪ್ರಕರಣದ ಮುದ್ದೇಮಾಲುಗಳನ್ನು ಯಾವುದೇ ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸಿಲ್ಲ ಎಂದರೆ ಸಾಕ್ಷಿಯು ತನಿಖಾಧಿಕಾರಿಯು ಈ ಕುರಿತು ತನಿಖೆ ಮಾಡಿರಬಹುದು ಎಂದು ನುಡಿಯುತ್ತಾರೆ.

ಕಾಮತ್ ಫಾರ್ಮ ಹೌಸ ಕಾಟೇಜಗೂ ಆರೋಪಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ, ಮುದ್ದೇಮಾಲಿಗೂ ಹಾಗೂ ಆರೋಪಿತರಿಗೂ ಯಾವುದೇ ಸಂಭಂಧ ಇಲ್ಲ ಎಂದರೆ ಸರಿಯಲ್ಲ. ನಮ್ಮ ಠಾಣೆಯ ಸಿಬ್ಬಂದಿಗಳನ್ನು ಉಪಯೋಗಿಸಿಕೊಂಡು ಈ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಆಯ್.ಜಿ. ಕಛೇರಿಯಿಂದ ನಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ರೆಸಾರ್ಟಗಳಿಗೆ ಸಂಬಂಧಪಟ್ಟಂತೆ ಮಾಹಿತಿಗಳನ್ನು ಕ್ರೋಢಿಕರಿಸಿ ಅವುಗಳನ್ನು ನಮ್ಮ ಠಾಣೆಯಲ್ಲಿ ಇಟ್ಟುಕೊಳ್ಳಬೇಕು ಎಂಬ ನಿರ್ದೇಶನ ಇದೆ ಎಂದರೆ ಸರಿ. ನನ್ನ ಠಾಣಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಹೋಟೇಲ ಹಾಗೂ ರೆಸಾರ್ಟನ ಮಾಲಿಕರು ಮುನ್ನೆಚರಿಕೆಯ ಸಲುವಾಗಿ ಕಾಲ ಕಾಲಕ್ಕೆ ಪೂರ್ವಭಾವಿ

ಸಭೆಗಳನ್ನು ನಡೆಸುತ್ತಿದ್ದೇವೆ ಎಂದರೆ ಸರಿ. ಎಲ್ಲಾ ಕಾಟೇಜಗಳಿಗೆ ಹಾಗೂ ಹೊಟೇಲಗಳಿಗೆ ವಾಸಕ್ಕೆ ಬಂದಂತಹ ವ್ಯಕ್ತಿಗಳ ದಾಖಲೆಗಳನ್ನು ಸಂಗ್ರಹಿಸಿ ಸದ್ರಿ ದಾಖಲಾತಿಗಳನ್ನು ರಜಿಸ್ಟರನಲ್ಲಿ ನಮೂದಿಸಿ ಈ ಕುರಿತಂತೆ ಸಿ.ಸಿ. ಟಿ.ವಿ. ಕ್ಯಾಮರಾವನ್ನು ರೆಸಾರ್ಟನ ಮುಂಭಾಗಕ್ಕೆ ಹಾಗೂ ಸುತ್ತಲೂ ಅಳವಡಿಸಿಕೊಳ್ಳಬೇಕು ಎಂದು ಹೇಳುತ್ತೇವೆ ಎಂದರೆ ಸರಿ.

ನಾವು ಹೇಳಿದ ಮಾರ್ಗದರ್ಶನವನ್ನು ಪಾಲಿಸಿದ್ದಾರೋ ಇಲ್ಲವೋ ಎಂಬ ಬಗ್ಗೆ ನಾವು ನಮ್ಮ ಬಿಟ್ ಸಿಬ್ಬಂದಿಗಳ ಮುಖಾಂತರ ಪರಿಶೀಲಿಸುತ್ತೇವೆ ಎಂದರೆ ಸರಿ. ಕಾಮತ್ ಫಾರ್ಮ ಹೌಸ್ ನ ಮೇಲೆ ಇಂತಹ ಇನ್ನೋಂದು ಪ್ರಕರಣ ದಾಖಲಾಗಿತ್ತು. ಕಾಮತ್ ಫಾರ್ಮ ಹೌಸ್‌ನ ಮಾಲಕರು ಯಾರು ಎಂಬ ಬಗ್ಗೆ ಸದ್ರಿ ಸಂದರ್ಭದಲ್ಲಿ ನನಗೆ ಮಾಹಿತಿ ಇತ್ತು ಎಂದರೆ ಸರಿ. 3ನೇ ಆರೋಪಿತರನ್ನು ದಾಳಿಯ ಕಾಲದಲ್ಲಿ ಸದ್ರಿ ಹೊಟೇಲನ್ನು ನಡೆಸುತ್ತಿದ್ದ ಎಂಬ ಬಗ್ಗೆ ಯಾವುದೇ ದಾಖಲಾತಿ ಸಿಕ್ಕಿರುವುದಿಲ್ಲ. ದಾಳಿಯ ಸಂದರ್ಭದಲ್ಲಿ ಯಾವುದೇ ರಜಿಸ್ಟರನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸಾಕ್ಷಿಯು ಅಲ್ಲಿ ಯಾವುದೇ ರಜಿಸ್ಟರ ಇರಲಿಲ್ಲ ಎಂದು ನುಡಿಯುತ್ತಾರೆ.

ನಿ.ಪಿ.2 ನ್ನು ಘಟನಾ ಸ್ಥಳದಲ್ಲಿ ತಯಾರಿಸಿರುತ್ತೇವೆ. ನಿ.ಪಿ.1 ಹಾಗೂ ನಿ.ಪಿ.2 ರಲ್ಲಿ ಇರುವ ಗಡಿಗಳಿಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಿ.ಪಿ.2 ನ್ನು ನಾವು ದಾಳಿಗೆ ಹೋದಂತಹ ಸಂದರ್ಭದಲ್ಲಿ ವಸ್ತುಸ್ಥಿತಿಗೆ ಅನುಗುಣವಾಗಿ ತಯಾರಿಸಿರುತ್ತೇವೆ. ನಿ.ಪಿ.2 ರಲ್ಲಿ ಒಂದೊಂದು ಕಟ್ಟಡಗಳಿಗೆ ಎಷ್ಟು ಅಂತರ ಇರುತ್ತವೆ ಎಂಬ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ತನಿಖಾ ಕಿಟ್‌ನಲ್ಲಿ ಟೇಪ್ ಇದ್ದು ನಾವು ಅದನ್ನು ಆಳತೆಗಾಗಿ ಉಪಯೋಗಿಸಿಕೊಂಡಿಲ್ಲ ಎಂದರೆ ಸರಿ.

ಗಿರಾಕಿಗಳು ಅವರಾಗಿಯೇ ತಾವುಗಳು ಗಿರಾಕಿಗಳು ಎಂದು ಹೇಳಿದ ಆಧಾರದ ಮೇಲೆ ಅವರನ್ನು ಗಿರಾಕಿಗಳು ಎಂಬ ನಿರ್ಧಾರಕ್ಕೆ ಬಂದಿರುತ್ತೇವೆ ಎಂದರೆ ಸರಿಯಲ್ಲ. ಈ ಕುರಿತಾಗಿ ಯಾವುದೇ ಅಧಿಕೃತ ದಾಖಲಾತಿಗಳು ಸದ್ರಿ ಸಂದರ್ಭದಲ್ಲಿ ಸಿಕ್ಕಿಲ್ಲ ಎಂದರೆ ಸರಿಯಲ್ಲ. ಘಟನಾ

ಸ್ಥಳದಲ್ಲಿ ಲೈಂಗಿಕ ಚಟುವಟಿಕೆ ನಡೆಯುತ್ತಿತ್ತು ಎಂಬ ಬಗ್ಗೆ ನಿಪಿ 1 ಹಾಗೂ 4 ರಲ್ಲಿ ನಮಾದು ಇಲ್ಲ ಎಂದರೆ ಸಾಕ್ಷಿಯು ಈ ಬಗ್ಗೆ ಎಲ್ಲಾ ಸಾಕ್ಷಿದಾರರು ಒಪ್ಪಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಈ ಪ್ರಸ್ತುತ ಸಂದರ್ಭವನ್ನು ಊಹಿಸಿಕೊಂಡು ಸಾಕ್ಷಿದಾರರ ಹೇಳಿಕೆಯ ಮೇರೆಗೆ ಈ ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ 4 ರಿಂದ 6 ರವರನ್ನು ಅವರೇ ಈ ಪ್ರಕರಣದ ಕುರಿತಾಗಿ ಒಪ್ಪಿಕೊಂಡಿರುವುದರಿಂದ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿರುವುದಿಲ್ಲ.

ನಾವು ಈ ಪ್ರಕರಣದ ಮಾಹಿತಿ ಬಂದ ವಿಚಾರವವನ್ನು ಠಾಣಾ ದಿನಚರಿಯಲ್ಲಿ ನಮೂದು ಮಾಡಿದ ಬಗ್ಗೆ ನಿಪಿ 1 ಹಾಗೂ 4 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಈ ಸ್ವರೂಪದ ಪ್ರಕರಣಗಳನನ್ನು ದಾಖಲು ಮಾಡಿದರೆ ಮೇಲಾಧಿಕಾರಿಗಳ ಪ್ರಶಂಸೆಗೆ ಒಳಪಡಬಹುದು ಎಂಬ ಕಾರಣದಿಂದಾಗಿ ಈ ಪ್ರಕರಣವನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

ನನ್ನ ಠಾಣೆಯಲ್ಲಿ ಅಪರಾಧಗಳ ವಿವರದ ಪಟ್ಟಿ ಇದೆ ಎಂದರೆ ಸರಿ. ಈ ಸ್ವರೂಪದ ಪ್ರಕರಣಗಳ ಕಾಲಂಗಳ ಪ್ರಕರಣಗಳು ಖಾಲಿ ಇದ್ದ ಕಾರಣದಿಂದಾಗಿ ಠಾಣಾ ಸಂಕಿ ಸಂಖ್ಯೆಗಾಗಿ ಈ ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. 3 ನೇ ಆರೋಪಿನಿಗೆ ಹಾಗೂ 1 ಹಾಗೂ 2 ನೇ ಆರೋಪಿತರಿಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 3 ನೇ ಆರೋಪಿತನು ಕಾಮತ್ ಫಾರ್ಮ ಹೌಸ್ ನ್ನು ನೋಡಿಕೊಳ್ಳುವ ವ್ಯಕ್ತಿ ಅಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಪ್ರ.ದ.ನ್ಯಾ.ದಂ. ಕುಮಟಾ